ಅಧ್ಯಕ್ಷರು: ಈ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ತಾವು ಇನ್ನೊಂದು ಪ್ರಶ್ನೆ ಕೇಳಿ. ಮುಂದಿನ ಅಧಿವೇಶನದಲ್ಲಿ ಉತ್ತರ ತರಿಸಿಕೊಡುತ್ತಾರೆ.

ಶ್ರೀ ಬಿ.ಎಂ. ಇದಿನಬ್ಬ: ಕರ್ನಾಟಕದಲ್ಲಿ ಇರುವ ವೈದ್ಯಕೀಯ ಕಾಲೇಜುಗಳಲ್ಲಿ ನಮ್ಮ ಕರ್ನಾಟಕದವರು ಅಲ್ಲ, ನಮ್ಮ ದೇಶದವರೂ ಅಲ್ಲ, ಅಂತರರಾಷ್ಟ್ರೀಯ ಅಂದರೆ ವಿದೇಶೀಯರು ಬಂದು, ಲಕ್ಷಾಧಿಪತಿಗಳು ಕೋಟ್ಯಾಧಿಪತಿಗಳು ಬಂದು ಇಲ್ಲಿ ಸೇರಿಕೊಂಡು ಶುಲ್ಕ ಕೊಟ್ಟು ವ್ಯಾಸಂಗ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಂದರೆ ವಿದೇಶೀಯರಿಗೆ ಕರ್ನಾಟಕ ಆಡಂಬರ ಆಗುವುದು ಸರಿಯೇ? ಇವತ್ತು ಕರ್ನಾಟಕದವರು ನಮ್ಮ ಕಾಲೇಜುಗಳಲ್ಲಿ ಶುಲ್ಕ ಇಲ್ಲದೇ, ವ್ಯಾಸಂಗ ಮಾಡುವ, ಕಲಿಯುವ ಕಾರ್ಯಕ್ರಮಗಳನ್ನು ಸರ್ಕಾರ ಏತಕ್ಕೆ ಮಾಡಬಾರದು? ಇವತ್ತು ಏನು 3 ವರ್ಷಗಳವರೆಗೆ ಹೊಸ ಕಾಲೇಜುಗಳಿಗೆ ಪರವಾನಿಗೆ ಕೊಡುವುದಿಲ್ಲ ಎಂದಿದ್ದಾರೆ ಇದು ಬಹಳ ಒಳ್ಳೆಯದು ಇದೆ. ಈ ರೀತಿ ವಿದೇಶಿಯರು ಬಂದು ಮೇಲಾಟ ಆಡುವುದು ಏಕೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ: ನಮ್ಮ ಕಾಲೇಜು ಸೀಟ್‌ಗಳಲ್ಲಿ ಇಂತಿಷ್ಟು ಸೀಟ್‌ಗಳನ್ನು ಇಂಡಿಯಾ ಗೌರ್ನಮೆಂಟ್‌ಗೆ ಕೊಡುತ್ತೇವೆಂದು ನಾವು ಒಪ್ಪಿಕೊಂಡಿದ್ದೇವೆ. ಇಂಡಿಯಾ ಗೌರ್ನಮೆಂಟ್‌ನವರು ಯಾವ ದೇಶದವರ ಹೆಸರನ್ನು ರೆಕ್‌ಮಂಡ್ ಮಾಡುತ್ತಾರೋ ಅವರು ಸಿಲೋನ್‌ರವರೇ ಇರಬಹುದು. ಮಲೇಶಿಯಾದೇಶದವರೇ ಇರಬಹುದು ಅವರಿಗೆ ನಾವು ಸೀಟ್ ಕೊಡಬೇಕಾಗುತ್ತದೆ. ಆ ಪ್ರಕಾರ ಕಾಯ್ದೆ ಕರಾರು ಆಗಿದೆ. ಇಂಡಿಯಾ ಗೌರ್ನಮೆಂಟ್‌ನವರ ಸೀಟಿನಲ್ಲಿ ವಿದೇಶಿಯರಿಗೆ ಕೊಡುತ್ತೇವೆಯೇ ಹೊರತು ನಮ್ಮ ಮಕ್ಕಳ ಸೀಟನ್ನು ಯಾರಿಗೂ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಈಗ ಎಲ್ಲ ಕಡೆಯೂ ನೂರಕ್ಕೆ 80 ಭಾಗ ಇರಾನ್ ಇರಾಕ್‌ನವರೇ ಇದ್ದಾರೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ: ಅದು ಮೇನೇಜ್‌ಮೆಂಟ್‌ನವರ ಸೀಟ್‌ಗಳು

ಶ್ರೀ ಡಿ.ಬಿ. ಚಂದ್ರೇಗೌಡ: ಸರ್ಕಾರಿ ವೈದ್ಯ ಕಾಲೇಜಿನಲ್ಲಿ ಒಬ್ಬ ಮೆಡಿಕಲ್ ವಿದ್ಯಾರ್ಥಿಯನ್ನು ತಯಾರು ಮಾಡುವುದಕ್ಕೆ ತಲಾ ಎಷ್ಟು ಖರ್ಚು ಸರ್ಕಾರಕ್ಕೆ ಆಗುತ್ತದೆ ಎಂದು ನಾನು ಕೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ: ಅದಕ್ಕೆ ನನಗೆ ನೋಟೀಸ್ ಬೇಕು.

ಶಿಗ್ಗಾಂವ ಪಟ್ಟಣಕ್ಕೆ ಬಸ್ಸು ನಿಲ್ದಾಣ

1657 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರು ಶಿಗ್ಗಾಂವ ನಗರದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ, ಇನ್ನೂ ಎಷ್ಟು ದಿನಗಳಲ್ಲಿ ಬಸ್ ಸ್ಟ್ಯಾಂಡ್ ನಿರ್ಮಿಸಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಹೌದು.

ಆ) ಜಿಲ್ಲಾಧಿಕಾರಿ, ಧಾರವಾಡ ಇವರನ್ನು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೋರಲಾಗಿದೆ. ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಬಸ್ ಸ್ಟ್ಯಾಂಡನ್ನು ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರ: ಮಾನ್ಯ ಅಧ್ಯಕ್ಷರೇ, ಶಿಗ್ಗಾಂವ್ ನಗರದಲ್ಲಿ ಬಸ್ ನಿಲ್ದಾಣ ಬೇಕೆಂದು ಕೇಳಿದ್ದು, ಅದನ್ನು ಪ್ರಾರಂಭ ಮಾಡುವುದಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಬಹಳ ಸಂತೋಷ. ಆದರೆ ಶಿಗ್ಗಾಂವ್ ನಗರ ಧಾರವಾಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿರತಕ್ಕ ಒಂದು ಮುಖ್ಯ ಸ್ಥಳ ಮತ್ತು ಇದು ತಾಲ್ಲೂಕಿನ ಮುಖ್ಯ ಕೇಂದ್ರವಾಗಿದ್ದು ಬಸ್ ನಿಲ್ದಾಣ ಇಲ್ಲದೆ ಗ್ರಾಮಾಂತರ ಜನರಿಗೆ ಬಹಳ ತೊಂದರೆಯಾಗಿದೆ. ಕಳೆದ 1 ವರ್ಷದಿಂದ ಜಿಲ್ಲಾಧಿಕಾರಿಗಳಿಗೆ ಭೂಮಿ ಸ್ವಾಧೀನ ಮಾಡಿಕೊಂಡು ಬಸ್ ನಿಲ್ದಾಣ ಮಾಡಬೇಕೆಂದು ಆದೇಶ ಕೊಟ್ಟಿದ್ದರೂ ಕೂಡಾ ಇದು ಬಹಳ ವಿಳಂಬವಾಗಿದೆ. ಆದ್ದರಿಂದ ಆದಷ್ಟು ತ್ವರಿತ ಗತಿಯಿಂದ ಈ ಕಾರ್ಯಕ್ರಮವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್: ಮಾನ್ಯ ಸದಸ್ಯರು ಪ್ರಶ್ನೆ ಕೇಳಿ ಅವರೇ ಉತ್ತರ ಹೇಳಿದ್ದಾರೆ. ಬಸ್ ಸ್ಟ್ಯಾಂಡ್ ಅಗತ್ಯವಿದೆ ಅದನ್ನು ಯಾವಾಗ ಮಾಡುತ್ತೀರೆಂದು ಕೇಳಿದ್ದಾರೆ. ಜಿಲ್ಲಾಧಿಕಾರಿಯವರನ್ನು ಜಾಗ ಕೇಳಿದ್ದೇವೆ. ಅವರು ಜಾಗ ಕೊಡಿಸುವುದಕ್ಕೆ ತಯಾರಿದ್ದರೆ ನಾವು ಕಟ್ಟುವುದಕ್ಕೆ ತಯಾರಿದ್ದೇವೆ ಇದಕ್ಕೆ 2 ಎಕರೆ ಜಾಗ ಬೇಕಾಗುತ್ತದೆ. We have asked the DC to give us some suitable land for this purpose. Moment we get we are the first person to give them bus stand.....

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಸೇಠ್‌ರವರು ಕನ್ನಡದಲ್ಲಿ ಇಂದು ಮಾತನಾಡುತ್ತಿದ್ದಾರೆ ಬಹಳ ಸಂತೋಷ.

ಶ್ರೀ ಅಜೀಜ್ ಸೇಠ್: ಕನ್ನಡದಲ್ಲಿ ಮಾತನಾಡಿದರೂ ಕಷ್ಟ, ಇಂಗ್ಲೀಷಿನಲ್ಲಿ ಮಾತನಾಡಿದರೂ ಕಷ್ಟ.

ಶ್ರೀ ವಾಟಾಳ್ ನಾಗರಾಜ್: ಕನ್ನಡದಲ್ಲಿ ನೀವು ಮಾತನಾಡಿದ ತಕ್ಷಣ ಅವರಿಗೆ ಬಿರಿಯಾನಿ ತಿಂದ ಹಾಗಾಯಿತು.

ಶ್ರೀ ಮಂಜುನಾಥ ಸಿ. ಕುನ್ನೂರ : ಮಾನ್ಯ ಸಚಿವರು ಜಮೀನನ್ನು ತೆಗೆದುಕೊಳ್ಳಬೇಕು, ಅವರೇ ಕೊಡಿಸಬೇಕೆಂದು ಹೇಳಿದರು. ಹುಬ್ಬಳ್ಳಿ ಕೆ.ಎಸ್.ಆರ್.ಟಿ.ಸಿ ಡಿವಿಜನಲ್ ಕಂಟ್ರೋಲ್‌ರವರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ರಾಷ್ಟ್ರೀಯ ಹೆದ್ದಾರಿ ಶಿಗ್ಗಾಂವ್ ಗ್ರಾಮದ ಹತ್ತಿರ ಒಂದು ಜಮೀನನ್ನು ತೋರಿಸಿದ್ದೇನೆ. ಆ ಜಮೀನನ್ನು ಅವರು ಬಂದು ನೋಡಿಕೊಂಡು ಹೋದರು. ಇದರ ಬಗ್ಗೆ ನಾನು ಅನೇಕ ಸಲ ರಿಮೆಂಡರ್ ಕಳಿಸಿದೆ. ಆದರೂ ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಆ ಜಮೀನನ್ನು ತಮಗೂ ಬೇಕಾದರೆ ತೋರಿಸುತ್ತೇನೆ. ಅಲ್ಲಿ ಕೂಡಲೇ ಬಸ್ ಸ್ಟ್ಯಾಂಡ್ ಮಾಡುವ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri Azeez Sait: Hon. Member might have shown the place. I don't know whether that particular land is suitable for the bus stand or not. I will however instruct my department to contact the concerned MLA and see that the matter is expedited.

ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದು

1670 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಚಾಲಕರಿಗೆ ಅಪಘಾತಗಳನ್ನು ಕಡಿಮೆ ಮಾಡಲು ಮತ್ತು ಸರಿಯಾಗಿ ಬಸ್ಸುಗಳ ಚಾಲನೆ ಮಾಡಲು ತರಬೇತಿ ಕೊಡಲಾಗುತ್ತಿದೆಯೇ?